# ಆಧ್ಯಾತ್ಮಿಕತೆಯ ಬೆಳಕಿನಲ್ಲಿ ತೀರ್ಥಯಾತ್ರೆ, ತೀರ್ಥಕ್ಷೇತ್ರಗಳು

ಡಾ. ವಾಗೀಶ್ವರೀ ಶಿವರಾಮ

ತೀರ್ಥಯಾತ್ರೆಯೆಂದರೆ ಕೇವಲ ಪ್ರವಾಸವಲ್ಲ; ಅದೊಂದು ಆಧ್ಯಾತ್ಮಿಕ ಆಚರಣೆ. ಈ ಕುರಿತು ನಮ್ಮ ಶಾಸ್ತ್ರಗಳು, ಪರಂಪರೆ ಹೊಂದಿರುವ ದೃಷ್ಟಿ ಎಂತಹದು ಎಂಬುದನ್ನಿಲ್ಲಿ ವಿವರಿಸಲಾಗಿದೆ. ಲೇಖಕರು ಹಿರಿಯ ಸಂಸ್ಕೃತ ವಿದ್ವಾಂಸರು; ಮಂಗಳೂರಿನಲ್ಲಿ ಅಧ್ಯಾಪಕರಾಗಿ ಹಲವು ವರ್ಷ ಸೇವೆ ಸಲ್ಲಿಸಿರುವ ಅವರು ಮೂವತ್ತಕ್ಕೂ ಹೆಚ್ಚು ಉತ್ತಮ ಗ್ರಂಥಗಳನ್ನು ರಚಿಸಿದ್ದಾರೆ. ಅವರು ಉತ್ತಮ ವಾಗ್ಮಿಗಳೂ ಹೌದು.

ಭಾರತ ಪುಣ್ಯಭೂಮಿ, ಕರ್ಮಭೂಮಿ, ಮೋಕ್ಷಭೂಮಿ ಎಂದೇ ಪ್ರಸಿದ್ಧವಾಗಿದೆ. ಇಲ್ಲಿ ಹರಿಯುವ ಗಂಗಾ, ಯಮುನಾ, ತುಂಗಾ, ಸರಸ್ವತಿ, ನರ್ಮದಾ ಇವೇ ಮೊದಲಾದ ಪವಿತ್ರನದಿಗಳು ಹಾಗೂ ಅವುಗಳ ದಡದಲ್ಲಿ ಸ್ಥಾಪಿತವಾಗಿರುವ ದೇವಾಲಯಗಳು ಅಸಂಖ್ಯಾತ. ಪುಣ್ಯಕ್ಷೇತ್ರಗಳ, ತೀರ್ಥಕ್ಷೇತ್ರಗಳ ಸಂದರ್ಶನಕ್ಕಾಗಿ ತೀರ್ಥಯಾತ್ರೆ ಕೈಗೊಳ್ಳುವ ಪರಂಪರೆ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವೇ ಆಗಿದೆ. ಇವುಗಳ ಪ್ರಮುಖ ಉದ್ದೇಶ ಮೋಕ್ಷಕ್ಕಾಗಿ ಪುಣ್ಯಸಂಪಾದನೆಯಾದರೂ, ಸಾಮಾಜಿಕ, ಐತಿಹಾಸಿಕ ಅರಿವಿನ ವಿಸ್ತಾರಗಳೊಡನೆ ಬದುಕಿನಲ್ಲಿ ಪೂರ್ಣತೆಯನ್ನು, ಪಕ್ವತೆಯನ್ನು ಗಳಿಸಿಕೊಳ್ಳುವುದೂ ಆಗಿತ್ತು. ವಾಹನ ಸೌಕರ್ಯಗಳಿಲ್ಲದ ಕಾಲದಲ್ಲಿ, ನಮ್ಮ ಹಿರಿಯರು ಕಾಲ್ನಡಿಗೆಯಲ್ಲೇ ತೀರ್ಥಯಾತ್ರೆ ಕೈಗೊಳ್ಳುತ್ತಿದ್ದರು. ಬದುಕಿನಲ್ಲಿ ಒಮ್ಮೆಯಾದರೂ, ಪ್ರಸಿದ್ಧವಾದ ಮೋಕ್ಷದಾಯಕ ಸಪ್ತ ಪುಣ್ಯಕ್ಷೇತ್ರಗಳಾದ ಅಯೋಧ್ಯಾ, ಮಥುರಾ, ಕಾಶೀ, ಕಾಂಚೀ, ಉಜ್ಜಯನೀ (ಅವಂತಿಕಾ), ಪುರೀ, ದ್ವಾರಕೆ — ಇವುಗಳಲ್ಲಿ ಒಂದನ್ನಾದರೂ ಸಂದರ್ಶಿಸುವ ಉತ್ಕಟ ಅಭಿಲಾಷೆ ಹೊಂದಿರುತ್ತಿದ್ದರು. ಕಾಲ್ನಡಿಗೆಯಲ್ಲೇ ಯಾತ್ರೆ ಹೊರಟಾಗ, ಹಿಂತಿರುಗಿ ಬರುವ ಭರವಸೆಯಿಲ್ಲದೇ ಆತ್ಮಶ್ರಾದ್ಧಾದಿಗಳನ್ನು ಮಾಡಿಕೊಂಡೇ ಹೋಗುತ್ತಿದ್ದರು ಎಂದೂ ಹೇಳುತ್ತಾರೆ.

''ಮಹಾತ್ಮರು ನಡೆದದ್ದೇ ದಾರಿ'' (ಮಹಾಜನೋ ಯೇನ ಗತಃ ಸ ಪಂಥಾಃ) ಎನ್ನುವ ಮಾತಿನಂತೆ, ಸಂತರು, ಮಹಾತ್ಮರು, ಋಷಿಮುನಿಗಳು, ಆಚಾರ್ಯರು, ಪುರಾಣ ಪ್ರಸಿದ್ಧ ವ್ಯಕ್ತಿಗಳು ತೀರ್ಥಯಾತ್ರೆ ಕೈಗೊಳ್ಳುತ್ತಿದ್ದ ಹಲವು ಕಥೆಗಳು ನಮ್ಮ ಸಂಸ್ಕೃತಿಯ ಜೀವಾಳವೇ ಆಗಿರುವುದಾಗಿದೆ. ವಿಶ್ವಾಮಿತ್ರ ಮಹರ್ಷಿಗಳು ರಾಮ-ಲಕ್ಷ್ಮಣರನ್ನು ಯಾಗ ಸಂರಕ್ಷಣೆಗೆ ಕರೆದೊಯ್ದಾಗ, ಅನೇಕ ಪುಣ್ಯಕ್ಷೇತ್ರಗಳಿಗೆ, ಸಂಬಂಧಿಸಿದ ಕಥೆಗಳನ್ನು ತಿಳಿಸಿದ ವಿಷಯ ರಾಮಾಯಣದಲ್ಲಿದೆ. ಅಂತೆಯೇ ಮಹಾಭಾರತದಲ್ಲಿ ಅರ್ಜುನಾದಿಗಳು, ಶ್ರೀಕೃಷ್ಣ, ವಿದುರ, ಬಲರಾಮ, ಉದ್ಧವಾದಿಗಳು, ಅನೇಕ ಮಹರ್ಷಿಗಳು ತೀರ್ಥಯಾತ್ರೆ ಮಾಡಿದ್ದರ ಉಲ್ಲೇಖಗಳಿವೆ.

ಶಂಕರ-ಮಧ್ವ-ರಾಮಾನುಜ ಆಚಾರ್ಯರುಗಳೂ, ಸ್ವಾಮಿ ವಿವೇಕಾನಂದ ಮೊದಲಾದ ಪರಿವ್ರಾಜಕರೂ ಪುಣ್ಯಕ್ಷೇತ್ರಗಳ ಪರ್ಯಟನೆ ಮಾಡಿದ ವಿಷಯಗಳು ಇತಿಹಾಸದ ಪುಟಗಳಲ್ಲಿವೆ. ಚಿತ್ತಶೋಧನೆಯೇ ಎಲ್ಲಾ ಮಹಾತ್ಮರ ಪರ್ಯಟನೆಯ ಗುರಿ



ಯಾಗಿರುತ್ತಿತ್ತು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರು ಅಂತರಂಗದ ಶತ್ರುಗಳನ್ನು ಗೆಲ್ಲುವುದು, ಅಹಂಕಾರ, ಮಮಕಾರಗಳ ತ್ಯಾಗ, ಸಹನೆ-ಶಾಂತಿಗಳ ಗಳಿಕೆಯ ಮೂಲಕ ಸಾತ್ವಿಕಗುಣವನ್ನು ಮನಸ್ಸಿನಲ್ಲಿ ತುಂಬಿಕೊಳ್ಳುತ್ತಾ ''ಆತ್ಮವನ್ನು'' ಸುಸಂಸ್ಕಾರಗೊಳಿಸಿ ಮೋಕ್ಷದತ್ತ ಸಾಗುವ ಪರಮ ಗುರಿ ಅವರದಾಗಿರುತ್ತಿತ್ತು.

ಮಹಾತ್ಮರ ತೀರ್ಥಯಾತ್ರೆಯ ಪ್ರಸಂಗಗಳಿಂದ ನಾವು ಕಲಿತುಕೊಳ್ಳಬೇಕಾದ ಅನೇಕ ಪಾಠಗಳಿವೆ. ಒಮ್ಮೆ ಸಂತ ತುಕಾರಾಮರ ಬಳಿ, ತೀರ್ಥಯಾತ್ರೆ ಹೊರಟಿದ್ದ ಅನೇಕ ಭಕ್ತರು ಬಂದು, ''ಸಂತರೇ! ನೀವೂ ಬನ್ನಿ. ತೀರ್ಥಯಾತ್ರೆಗೆ ಹೋಗೋಣ'' ಎಂದು ಆಹ್ವಾನಿಸಿದರಂತೆ. ಆಗ ಅವರು ''ಈಗ ನಾನು ಬರಲಾರೆ. ನನ್ನ ಪ್ರತಿನಿಧಿ

ಯಾಗಿ ಒಂದು ಸೋರೇಕಾಯಿ ಕೊಡುತ್ತೇನೆ. ಅದನ್ನು ತೆಗೆದು ಕೊಂಡು ನೀವು ಮುಳುಗುವ ತೀರ್ಥಗಳಲ್ಲಿ ಅದನ್ನೂ ಮುಳುಗಿಸಿ ಭಸ್ಮ, ಕುಂಕುಮ, ಗಂಧ ಹಚ್ಚಿ ಹಿಂದೆ ತನ್ನಿ'' ಎಂದರಂತೆ. ಅದರಂತೆ ಆ ಭಕ್ತರು ತೀರ್ಥಯಾತ್ರೆ ಮುಗಿಸಿ ನಂತರ ಬಳಿ ಹಿಂತಿರುಗಿ ಬಂದು, ಸೋರೇಕಾಯಿ ಒಪ್ಪಿಸಿದರು. ತುಕಾರಾಮರೂ ಭಕ್ತರ ಸೇವೆ ಮಾಡುತ್ತಾ, ಸೋರೇಕಾಯಿಯಿಂದ ಪಲ್ಯಮಾಡಿ, ಊಟ ಬಡಿಸಿದರು. ಆ ಭಕ್ತರು ಪಲ್ಯಬಾಯಿಗೆ ಇಟ್ಟಾಗ ಇದೇನಿದು ''ಕಹಿ, ಕಹಿ'' ಎಂದು ಬೊಬ್ಬಿಟ್ಟರಂತೆ. ಆಗ ತುಕಾರಾಮರು, ''ತೀರ್ಥಯಾತ್ರೆ ಮಾಡಿಸಿದರೂ, ಈ ಸೋರೇಕಾಯಿ ತನ್ನ ಕಹಿಗುಣ ಬಿಡಲಿಲ್ಲ. ಹಾಗೇ ತೀರ್ಥಯಾತ್ರೆ ಮಾಡಿಯೂ ನಮ್ಮ ಅಸೂಯೆ, ಕೋಪ-ತಾಪ, ಹಮ್ಮು-ಬಿಮ್ಮು ಬಿಡದಿದ್ದರೇನು ಪ್ರಯೋಜನ?'' ಎಂದರಂತೆ.

ಒಬ್ಬ ಚಮ್ಮಾರ, ತೀರ್ಥಯಾತ್ರೆಗಾಗಿ ಹಣ ಕೂಡಿಸಿಟ್ಟಿದ್ದ. ತನ್ನ ಪಕ್ಕದ ಮನೆಯ ಕುಟುಂಬದವರು ಹಸಿವೆಯಿಂದ ಬಳಲುತ್ತಿರುವುದನ್ನು ಕಂಡು, ತಾನು ಸಂಗ್ರಹಿಸಿಟ್ಟ ಎಲ್ಲಾ ಹಣವನ್ನು ಆ ಕುಟುಂಬಕ್ಕೆ ನೀಡಿ ದಯಾಗುಣ ಮೆರೆದ. ''ಈ ಚಮ್ಮಾರನೇ ತೀರ್ಥಯಾತ್ರೆ ಮಾಡಿದ ನನ್ನ ಭಕ್ತರಲ್ಲಿ ಅತ್ಯಂತ ಶ್ರೇಷ್ಠ'' ಎಂದು ಕ್ಷೇತ್ರದ ಅಧಿದೇವ ತನ್ನ ದೂತರಿಗೆ ಹೇಳಿದ - ಎಂಬ ಕಥೆಯು ದಯೆ, ಮೈತ್ರೀ, ಸಹನೆ, ಶಾಂತಿ ಇತ್ಯಾದಿ ಗುಣಗಳನ್ನು ಮೈಗೂಡಿಸಿಕೊಳ್ಳುವುದೇ ತೀರ್ಥಯಾತ್ರೆಗಿಂತಲೂ, ಪುಣ್ಯ ಸಂಪಾದನೆಯ ಹೆದ್ದಾರಿ ಎಂದು ತಿಳಿಸುತ್ತದೆ. ಅಂತೆಯೇ ಸರ್ವಜ್ಞನ ಈ ಮಾತು ಮನನೀಯವಾಗಿದೆ -''ಸತ್ಯರ ನಡೆ ತೀರ್ಥ, ನಿತ್ಯರ ನುಡಿ ತೀರ್ಥ, ಹರಿವ ನೀರದು ಎತ್ತಣದ ತೀರ್ಥ ಸರ್ವಜ್ಞ.'' ಅಂದರೆ ಪರಮ ಸತ್ಯವಾದ ಭಗವಂತನ ಸಾಕ್ಷಾತ್ಕಾರಕ್ಕಾಗಿ ಸಾಧನಾಶೀಲರಾಗಿರುವ ಮಹಾತ್ಮರು ನಡೆದಂತೆ ನಡೆಯುವುದು, ಹಾಗೂ ಅವರು ನುಡಿದ ಸನ್ಮಾರ್ಗದಲ್ಲಿ ನಡೆಯುವುದು ಎಲ್ಲಾ ತೀರ್ಥಯಾತ್ರೆಗಳಿಗಿಂತ ಹೆಚ್ಚಿನ ಪುಣ್ಯವನ್ನು ಗಳಿಸುವ ಮಾರ್ಗವಾಗಿದೆ ಎಂಬುದೇ ಮಥಿತಾರ್ಥ. ಗಂಗಾ, ಗಂಗಾ ಎಂದು ಶುದ್ಧ ಮನಸ್ಸಿನಿಂದ ಸ್ಮರಿಸುತ್ತಾ ಸ್ನಾನ ಮಾಡಿದರೂ ತೀರ್ಥಸ್ನಾನದ ಪುಣ್ಯ ಲಭ್ಯವೆಂದು ಪುರಾಣಗಳು ತಿಳಿಸುತ್ತವೆ. ಇದೇ ಮಾತನ್ನು ಪುರಂದರದಾಸರು ''ಮನಃ ಶುದ್ಧಿಯಿಲ್ಲದವಗೆ ಮಂತ್ರದ, ತೀರ್ಥದ ಫಲವೇನು?'' ''ಮನವ ಶೋಧಿಸಬೇಕೋ ನಿತ್ಯ, ಪುಣ್ಯ-ಪಾಪದ ವೆಚ್ಚ'' ಇತ್ಯಾದಿ ನುಡಿಗಳಲ್ಲಿ ತಿಳಿಸಿದ್ದಾರೆ.

ಈ ಶರೀರವೇ ಕ್ಷೇತ್ರ(ರಥ), ಅದರೊಳಗಿರುವ ಪರಮಾತ್ಮನೇ ಕ್ಷೇತ್ರಜ್ಞ (ಸಾರಥಿ), ಜೀವಾತ್ಮನೇ ಪ್ರಯಾಣಿಕ (ರಥಿಕ) ಎನ್ನುವ ಕಠೋಪನಿಷತ್ತಿನ ಸಾರವನ್ನೇ ಶ್ರೀಕೃಷ್ಣ ಭಗವದ್ಗೀತೆಯಲ್ಲಿ (ಕ್ಷೇತ್ರ-ಕ್ಷೇತ್ರಜ್ಞಯೋಗ, ೧೩) ತಿಳಿಸಿದ್ದಾನೆ. ಅಯೋಧ್ಯಾ, ಕಾಶೀ, ಕಾಂಚೀ.... ಈ ಎಲ್ಲಾ ಕ್ಷೇತ್ರಗಳೂ ಈ ಶರೀರವೇ ಆಗಿದೆ ಎನ್ನುವುದು ಅನುಭಾವಿಗಳ ಮಾತು. ಭೇದಿಸಲಾಗದ ಆತ್ಮವುಳ್ಳ ಶರೀರವೇ ಅಯೋಧ್ಯಾ(ನ ಯೋಧ್ಯಾ, ಅಯೋಧ್ಯಾ), ಆತ್ಮಜ್ಞಾನದ ಪ್ರಕಾಶ ಪಡೆಯಬಹುದಾಗಿರುವುದರಿಂದ ಕಾಶೀ (ಕಾಶ್ಯತೇ ಪ್ರಕಾಶ್ಯತೇ ಇತಿ ಕಾಶೀ) ಹೀಗೆ ದೇಹವನ್ನೇ ಪುಣ್ಯಕ್ಷೇತ್ರವೆಂದು ಭಾವಿಸಬೇಕು. ದೈನಂದಿನ ದೇವರ ಪೂಜೆಯಲ್ಲೂ ಇದನ್ನೇ ಹೇಳುವ ಪರಿಪಾಠವಿದೆ:

**ದೇಹೋ ದೇವಾಲಯಃ ಪ್ರೋಕ್ತಃ, ಜೀವೋ ಹಂಸಃ, ಸದಾಶಿವಃ ।**
**ತ್ಯಜೇತ್ ಅಜ್ಞಾನ ನೈರ್ಮಾಲ್ಯಂ, ಸೋऽಹಂ ಭಾವೇನ ಪೂಜಯೇತ್ ॥**

''ದೇಹವೇ ದೇವರಿರುವ ಗುಡಿ. ಜೀವಾತ್ಮನೇ ಮಂಗಳ ಕರನಾದ ಪರಮಾತ್ಮನ ಅಂಶಸ್ವರೂಪಿ, ಅಜ್ಞಾನವೆಂಬ ನಿರ್ಮಾಲ್ಯವನ್ನು ವಿಸರ್ಜಿಸಿ, ''ನೀನೇ, ನಾನು'' ಎಂಬ ಭಾವದಿಂದ ಪೂಜಿಸಬೇಕು'' — ಎನ್ನುವಲ್ಲಿ ಅದ್ವೈತ ತತ್ತ್ವದ ಸಾರ ಅಡಗಿದೆ.

ಸತ್ವಗುಣದ ಉದ್ದೀಪನದಿಂದ, ಹಂತಹಂತವಾಗಿ ಆತ್ಮ ಜಾಗೃತಿ ಆಗಬೇಕೆಂಬುದೇ ಸನಾತನ ಧರ್ಮದ ಗುರಿ. ಆತ್ಮ ಸಂಸ್ಕಾರವೇ ಪುಣ್ಯಕ್ಷೇತ್ರಗಳ ಸಂದರ್ಶನದ ಗುರಿ. ಸಂಸ್ಕಾರವೆಂದರೆ, ದೋಷವನ್ನು ನಿವಾರಿಸಿ, ಗುಣಗಳನ್ನು ತುಂಬುವುದು (ದೋಷಾಪನಯನಪೂರ್ವಕಂ ಗುಣಾದಾನಂ ಸಂಸ್ಕಾರಃ) ಪಾಪಕರ್ಮಗಳಿಂದ ಕರ್ಮದಗಂಟು ಹೆಚ್ಚಬಾರದೆಂದು ಅನುಭಾವಿಗಳು ಹೀಗೆ ಎಚ್ಚರಿಸಿದ್ದಾರೆ:

**ಅನ್ಯಕ್ಷೇತ್ರೇ ಕೃತಂ ಪಾಪಂ, ಪುಣ್ಯಕ್ಷೇತ್ರೇ ವಿನಶ್ಯತಿ ।**
**ಪುಣ್ಯಕ್ಷೇತ್ರೇ ಕೃತಂ ಪಾಪಂ, ವಜ್ರಲೇಪೋ ಭವಿಷ್ಯತಿ ॥**

''ಬೇರೆಯ ಕಡೆ ಮಾಡಿದ ಪಾಪಗಳು, ಪುಣ್ಯಕ್ಷೇತ್ರಗಳಲ್ಲಿ ನಾಶವಾಗುತ್ತವೆ. ಒಂದು ವೇಳೆ ಪುಣ್ಯಕ್ಷೇತ್ರದಲ್ಲೇ ಪಾಪಕರ್ಮ ಮಾಡಿದರೆ, ಅದು ವಜ್ರದ ಲೇಪದಂತೆ ಗಟ್ಟಿಯಾಗಿ ಅಂಟಿಕೊಳ್ಳುತ್ತದೆ.'' ಆದ್ದರಿಂದ ತೀರ್ಥಯಾತ್ರೆಯಲ್ಲಿರುವ ಮನೋರಂಜನೆಯ, ಸುಖ-ಭೋಗಗಳ ದೃಷ್ಟಿ ಬದಲಾಗಬೇಕು. ಮನೋವಿಕಾಸ, ಪಾಪಪರಿಮಾರ್ಜನೆ, ಪುಣ್ಯಸಂಪಾದನೆ, ಲೋಕಾನುಭವ ಗಳಿಕೆಗಳೇ ಪ್ರಮುಖವಾಗಬೇಕು. ಮನೋನಿಗ್ರಹ, ಮನಸ್ಸಿನ ಪ್ರಸನ್ನತೆ, ಕಷ್ಟಸಹಿಷ್ಣುತೆ, ಸಹನೆ ಇತ್ಯಾದಿ ಗುಣಗಳನ್ನು ಮೈಗೂಡಿಸಿಕೊಳ್ಳಲು ಯಾತ್ರಾಕಾಲದಲ್ಲಿ ಸದ್ಗ್ರಂಥಗಳ ಓದು, ಸ್ತೋತ್ರ ಪಠಣ, ಭಜನೆ, ನಾಮಸ್ಮರಣೆ, ಧ್ಯಾನ ಇತ್ಯಾದಿಗಳು ಅತ್ಯವಶ್ಯ. ಭಗವಂತನೇ ವಿಶ್ವರೂಪದಲ್ಲಿ ಅಭಿವ್ಯಕ್ತಗೊಂಡಿರುವುದರಿಂದ ಗಾಳಿ, ನೀರು, ಭೂಮಿ, ಸುತ್ತಲಿನ ಪರಿಸರ, ಮಲಿನಗೊಳ್ಳದಂತೆ ಎಚ್ಚರವೂ ಬೇಕು.

ಇದೇ ಸಂದರ್ಭದಲ್ಲಿ ವೇದವ್ಯಾಸರು, ''ದೇವೀಭಾಗವತ'' ಮಹಾಪುರಾಣದಲ್ಲಿ, ಚ್ಯವನ ಮಹರ್ಷಿಗಳ ಮೂಲಕ, ಪ್ರಹ್ಲಾದನಿಗೆ ತೀರ್ಥಯಾತ್ರೆಯ ಬಗ್ಗೆ ಮಾಡಿರುವ ಉಪದೇಶ ಮನನೀಯವಾಗಿದೆ:

ಒಮ್ಮೆ ಚ್ಯವನಮಹರ್ಷಿಗಳು ನರ್ಮದಾನದಿಯಲ್ಲಿ ಸ್ನಾನ ಮಾಡಲು ಇಳಿದಿದ್ದರು. ಸ್ನಾನ ಮಾಡಿ ಮೇಲೆ ಬರುತ್ತಿದ್ದ ಅವರನ್ನು

ಒಂದು ವಿಷಸರ್ಪವು ಹಿಡಿದುಕೊಂಡಿತು. ಕೂಡಲೇ ಚ್ಯವನರು ಅಪಾಯದಿಂದ ಪಾರಾಗಲು ಮಹಾವಿಷ್ಣುವನ್ನು ಮನಸ್ಸಿನಲ್ಲಿಯೇ ಧ್ಯಾನಿಸಿದರು. ಅವರ ಧ್ಯಾನದ ತೀಕ್ಷ್ಣತೆಯಿಂದ, ಸರ್ಪದ ವಿಷವೆಲ್ಲ ಇಳಿದುಹೋಗಿ, ಪೀಡಿಸುವ ಶಕ್ತಿಯನ್ನೇ ಕಳೆದುಕೊಂಡಿತು. ಆ ಸರ್ಪವು ಅವರನ್ನು ರಸಾತಲಕ್ಕೆ ಎಳೆದುಕೊಂಡು ಹೋಗುತ್ತಿದ್ದರೂ, ಮುನಿಗೆ ಸ್ವಲ್ಪವು ಕಷ್ಟ ಉಂಟಾಗಲಿಲ್ಲ. ಶಾಪದ ಭಯದಿಂದ, ಆ ಸರ್ಪ ಮುನಿಯನ್ನು ಬಿಟ್ಟು ಹೊರಟು ಹೋಯಿತು. ರಸಾತಲದಲ್ಲಿದ್ದ ನಾಗಕನ್ನಿಕೆಯರು ಮುನಿಯನ್ನು ಗೌರವದಿಂದ ಸತ್ಕರಿಸಿದರು. ಚ್ಯವನರು ಅಲ್ಲಿಯೇ ಸಂಚರಿಸುತ್ತಿದ್ದಾಗ, ದೈತ್ಯರಾಜ ಪ್ರಹ್ಲಾದನು ಅವರನ್ನು ನೋಡಿ, ಸತ್ಕರಿಸಿದನು. ಪರಸ್ಪರ ಸಂಭಾಷಣೆಯ ಸಂದರ್ಭದಲ್ಲಿ, ಚ್ಯವನರು ವಿಷ್ಣು ಸ್ಮರಣೆಯ ಮಹಿಮೆಯಿಂದಲೇ, ಸರ್ಪವು ವಿಷಹೀನವಾಗಿ, ಅವರನ್ನು ರಸಾತಲಕ್ಕೆ ತಂದುಬಿಟ್ಟ ವಿಷಯ ತಿಳಿಯಿತು. ವಿಷ್ಣು ಭಕ್ತನಾದ ಪ್ರಹ್ಲಾದನಿಗೆ, ವಿಷ್ಣುಭಕ್ತ ಚ್ಯವನರ ಭೇಟಿಯಿಂದ ತುಂಬಾ ಸಂತೋಷವಾಯಿತು. ಪ್ರಹ್ಲಾದನು, ಚ್ಯವನರನ್ನು ಕುರಿತು — ''ಮಹರ್ಷಿಗಳೇ! ಭೂಖಂಡದಲ್ಲಿರುವ ಶ್ರೇಷ್ಠವಾದ ತೀರ್ಥಗಳ ಬಗ್ಗೆ ವಿಸ್ತಾರವಾಗಿ ತಿಳಿಸಿ'' ಎಂದು ಕೇಳಿಕೊಂಡನು. ಆಗ ಚ್ಯವನರು ಹೀಗೆ ಹೇಳಿದರು:

**ಮನೋವಾಕ್ಕಾಯ ಶುದ್ಧಾನಾಂ ರಾಜನ್ ತೀರ್ಥಂ ಪದೇ ಪದೇ ।**
**ತಥಾ ಮಲಿನಚಿತ್ತಾನಾಂ ಗಂಗಾಪಿ ಕೀಕಟಾಽಧಿಕಾ ॥**

''ಎಲೈ ರಾಜನೇ, ಮನಸ್ಸು, ದೇಹ ಮಾತು ಎಂಬ ತ್ರಿಕರಣಗಳಲ್ಲಿಯೂ ಶುದ್ಧನಾಗಿರುವವನಿಗೆ ಹೆಜ್ಜೆ ಹೆಜ್ಜೆಯಲ್ಲಿಯೂ ತೀರ್ಥವೇ ಇರುತ್ತದೆ. ಕಾಮ, ಕ್ರೋಧಾದಿದೋಷಗಳಿಂದ ಮಲಿನವಾದ ಮನಸ್ಸುಳ್ಳವರಿಗೆ ಪವಿತ್ರವಾದ ಗಂಗಾನದಿಯೂ ಕೆಟ್ಟಸ್ಥಳಕ್ಕಿಂತಲೂ ಕೀಳಾಗಿರುತ್ತದೆ.''

**ಪ್ರಥಮಂ ಚೇತ್ ಮನಃ ಶುದ್ಧಂ , ಜಾತಂ ಪಾಪವಿವರ್ಜಿತಮ್ ।**
**ತದಾ ತೀರ್ಥಾನಿ ಸರ್ವಾಣಿ, ಪಾವನಾನಿ ಭವಂತಿ ವೈ ॥**

*(೪.೮.೨೯)*

''ಮೊದಲು ಮನಸ್ಸು ಶುದ್ಧವಾಗಿಯೂ, ಪಾಪರಹಿತವಾಗಿಯೂ ಇದ್ದರೆ ಆಗ ಎಲ್ಲ ತೀರ್ಥಗಳೂ ಶುದ್ಧವಾದವುಗಳೆ ಆಗುತ್ತವೆ.''

ಕೆಟ್ಟದ್ದನ್ನು ಆಲೋಚಿಸದೆ, ಒಳ್ಳೆಯದನ್ನೇ ಇತರರಿಗೂ ತನಗೂ ಬಯಸುವ ಮನಸ್ಸು ಶುದ್ಧವಾಗಿರುತ್ತದೆ. ಸತ್ಯವೂ, ಪ್ರಿಯವೂ ಆದ ಮಾತು ಶುದ್ಧವೆನಿಸುತ್ತದೆ. ಪಾಪಕಾರ್ಯಗಳನ್ನು ಮಾಡದೆ ಪರೋಪಕಾರಕ್ಕಾಗಿ ದುಡಿಯುತ್ತಿರುವವರ ಕರ್ಮವೂ ಶುದ್ಧವೆನಿಸುತ್ತದೆ. ಇಂತಹವರಿಗೆ ಸ್ನಾನ, ಶುದ್ಧವಸ್ತ್ರ, ಶುಚಿಯಾದ ಆಹಾರ ಮೊದಲಾದವುಗಳಿಂದ ದೇಹವೂ ನಿರ್ಮಲವಾಗಿರುತ್ತದೆ. ಹೀಗೆ ಮನಸ್ಸು-ಕಾಯಗಳು ಪರಿಶುದ್ಧವಾಗಿರುವುದನ್ನೇ ''ತ್ರಿಕರಣ ಶುದ್ಧಿ '' ಎನ್ನುತ್ತಾರೆ. ಈ ತ್ರಿಕರಣಗಳನ್ನು ಶುದ್ಧವಾಗಿಟ್ಟುಕೊಳ್ಳುವುದೇ ಎಲ್ಲಾ ತೀರ್ಥ ಸ್ನಾನಗಳಿಗಿಂತ ಮಿಗಿಲಾದುದು.

**ತತ್ರೈಕೋಽಪಿ ವಿಶುದ್ಧಾತ್ಮಾ , ನ ಭವತ್ಯೇವ ಮಾರಿಷ ।**
**ಕಿಂ ಫಲಂ ತರ್ಹಿ ತೀರ್ಥಸ್ಯ ವಿಷಯೋಪಹತಾತ್ಮ ಸು ॥**

*(೪.೮.೩೩)*

''ಎಲೈ ರಾಕ್ಷಸಶ್ರೇಷ್ಠನೇ! ಜನರು ಗಂಗಾಜಲವನ್ನೇ ಸ್ನಾನ-ಪಾನಾದಿಗಳಿಗೆ ಉಪಯೋಗಿಸಿದರೂ, ಅವರಲ್ಲಿ ಒಬ್ಬನೂ ಶುದ್ಧಾತ್ಮನಾಗಿಯೇ ಇರುವುದಿಲ್ಲ. ಏಕೆಂದರೆ ವಿಷಯಸುಖಗಳಲ್ಲಿ ಆಸೆಯಿರುವವರಿಗೆ ಈ ತೀರ್ಥಸ್ನಾನಾದಿಗಳು ನಿಷ್ಫಲವೇ ಆಗಿರುತ್ತವೆ.''

**ಕಾರಣಂ ಮನ ಏವಾತ್ರ, ನಾನ್ಯತ್ ರಾಜನ್ ವಿಚಿಂತಯ ।**
**ಮನಃಶುದ್ಧಿಃ ಪ್ರಕರ್ತವ್ಯಾ , ಸತತಂ ಶುದ್ಧಿಮಿಚ್ಛತಾ ॥**

*(೪.೮.೩೪)*

''ಓ ರಾಜನೇ! ಎಲ್ಲಕ್ಕೂ ಮನಸ್ಸೇ ಕಾರಣವು, ಬೇರೆ ಯಾವುದೂ ಅಲ್ಲ ಎಂಬುದನ್ನು ಆಲೋಚಿಸಿ ನೋಡು. ಆದ್ದರಿಂದ ಶುದ್ಧವಾಗಿರಲು ಬಯಸುವವನು ಮೊದಲು ಮನಸ್ಸಿನ ನೈರ್ಮಲ್ಯವನ್ನು ಗಳಿಸಿಕೊಳ್ಳಬೇಕು.''

**ತೀರ್ಥವಾಸೀ ಮಹಾಪಾಪೀ ಭವೇತ್ ತತ್ರಾನ್ಯವಂಚನಾತ್ ।**
**ತತ್ರೈವಾಚರಿತಂ ಪಾಪಮ್, ಆನಂತ್ಯಾಯ ಪ್ರಕಲ್ಪತೇ ॥**

*(೪.೮.೩೫)*

'ತೀರ್ಥಕ್ಷೇತ್ರಗಳಲ್ಲಿ ವಾಸಮಾಡುವವರು, ಅಲ್ಲಿಗೆ ಬರುವವರನ್ನು ವಂಚಿಸುವದರಿಂದ ಮಹಾಪಾಪಿಗಳಾಗುತ್ತಾರೆ.' ಪವಿತ್ರವಾದ ತೀರ್ಥಕ್ಷೇತ್ರಗಳಲ್ಲಿ ಮಾಡುವ ಪಾಪವು ಒಂದಕ್ಕೆ ಅನಂತದಷ್ಟು ಹೆಚ್ಚು ದುಷ್ಫಲವುಳ್ಳದ್ದಾಗಿರುತ್ತದೆ.''

''ದುರ್ಭಾವನೆಯುಳ್ಳ ಮನುಷ್ಯನಿಗೆ ಕೋಟಿತೀರ್ಥಗಳ ಸ್ನಾನವೂ ಶುದ್ಧಿಯನ್ನು ಉಂಟುಮಾಡಲಾರದು. ಶ್ರೇಯಸ್ಸನ್ನು ಬಯಸುವ ಮನುಷ್ಯನು ಮೊದಲು ತನ್ನ ಮನಸ್ಸಿನ ಶುದ್ಧಿಯನ್ನು ಮಾಡಿಕೊಳ್ಳಬೇಕು. ಆಚಾರ, ವಿಚಾರಗಳು ಶುದ್ಧವಾದಾಗ. ತೀರ್ಥಸ್ನಾನದ ಫಲವು ಸಿದ್ಧಿಸುವುದು ಪುಣ್ಯಕ್ಷೇತ್ರಗಳಲ್ಲಿ ನೀಚ ಜನರ ಸಹವಾಸ ಮಾಡಬಾರದು. ತ್ರಿಕರಣಗಳಿಂದ ಸರ್ವ ಪ್ರಾಣಿಗಳಲ್ಲಿಯೂ ದಯೆ ತೋರಿಸಬೇಕು.'' ಹೀಗೆ ಉಪದೇಶಿಸಿದ ಚ್ಯವನರು, ಬಳಿಕ ನೈಮಿಷಾರಣ್ಯ ತೀರ್ಥ, ಚಕ್ರತೀರ್ಥ, ಪುಷ್ಕರ ತೀರ್ಥ ಹಾಗೂ ಅಸಂಖ್ಯಾತ ತೀರ್ಥಗಳ ಪರಿಚಯ ಮಾಡಿಸಿದರು. ಪ್ರಹ್ಲಾದನೂ ಅವರ ಉಪದೇಶದಿಂದ ಸಂತುಷ್ಟನಾಗಿ, ಅವರು ಹೇಳಿದ ರೀತಿಯಲ್ಲೇ, ತನ್ನ ಪರಿವಾರದವರೊಡನೆ ನೈಮಿಷ ತೀರ್ಥದ ಯಾತ್ರೆಗೆ ಪ್ರಯಾಣ ಹೊರಟನು.

ವಿಷ್ಣುಭಕ್ತರಾದ ಪ್ರಹ್ಲಾದ, ಚ್ಯವನಮಹರ್ಷಿಗಳ ವಿಚಾರಗಳನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಂಡು ತೀರ್ಥಯಾತ್ರೆ, ಪುಣ್ಯಕ್ಷೇತ್ರಗಳ ದರ್ಶನ ಮಾಡಿದಾಗಲೇ ನಮ್ಮ ಬದುಕಿನ ಯಾತ್ರೆ ಅರ್ಥಪೂರ್ಣವಾದೀತು.